ಪ್ರಬಂಧ

# ಆ ಮೂರು ದಿನಗಳು

 

ಮೂಲ: **ಹೆಲೆನ್ ಕೆಲ್ಲರ್**

ಕನ್ನಡಕ್ಕೆ: **ಸುಧಾ ಆಡುಕಳ**

ಕಲೆ: ವಿಶ್ವನಾಥ್ ಎ.ಎಸ್.

ಹೆಲೆನ್ ಕೆಲ್ಲರ್ ಅಮೆರಿಕದ ಪ್ರಖ್ಯಾತ ಬರಹಗಾರ್ತಿ, ಉಪನ್ಯಾಸಕಿ, ಸಾಮಾಜಿಕ ಕಾರ್ಯಕರ್ತೆ ಹಾಗೂ ವಿಶೇಷ ಚೇತನರ ಏಳಿಗೆಗಾಗಿ ಹಗಲಿರುಳೂ ಶ್ರಮಿಸಿದ ಮಹಾನ್ ಮಾನವತಾವಾದಿ. ಒಂದೂವರೆ ವರ್ಷವಿದ್ದಾಗಲೇ ಅನಾರೋಗ್ಯದಿಂದ ಬಾಧಿತರಾದ ಅವರು ತಮ್ಮ ಕಣ್ಣು ಮತ್ತು ಕಿವಿಗಳನ್ನು ಶಾಶ್ವತವಾಗಿ ಕಳೆದುಕೊಂಡರು. ಸುತ್ತಲ ಪ್ರಪಂಚವನ್ನು ಅರಿಯುವ ಪ್ರಮುಖ ಅಂಗಗಳಿಂದ ವಂಚಿತರಾದ ಅವರು ಹಿಂಸ್ರ ಪಶುವಿನಂತೆ ದಿನದಿಂದ ದಿನಕ್ಕೆ ಕ್ರೂರಿಯಾಗತೊಡಗಿದರು. ಆದರೆ ಅವರಿಗೆ ಗುರುವಾಗಿ ಬಂದ ಆನ್ ಸುಲಿವನ್ ಮ್ಯಾಸಿಯವರ ಸತತ ಪರಿಶ್ರಮ ಮತ್ತು ಅಪಾರ ತಾಳ್ಮೆಯಿಂದಾಗಿ ಅದ್ಭುತ ಪ್ರತಿಭೆಯಾಗಿ ರೂಪುಗೊಂಡರು. ಹನ್ನೆರಡು ಪುಸ್ತಕಗಳನ್ನು ಪ್ರಕಟಿಸಿದರು. ಮೂರು ದಿನಗಳ ಮಟ್ಟಿಗೆ ತನಗೆ ಕಣ್ಣು ಕಾಣಿಸುವಂತಾದರೆ ಆ ಅವಧಿಯಲ್ಲಿ ತಾನು ಏನೆಲ್ಲವನ್ನು ಮಾಡಬಯಸುತ್ತೇನೆ ಎಂಬುದರ ಬಗ್ಗೆ ಅವರು ಬರೆದ ಪ್ರಬಂಧವೊಂದರ ಅನುವಾದ ಇಲ್ಲಿದೆ. ನಮ್ಮ ಪಂಚೇಂದ್ರಿಯಗಳನ್ನು ಹೇಗೆ ಪರಿಣಾಮಕಾರಿಯಾಗಿ ಬಳಸಬಹುದು ಎಂಬುದಕ್ಕೆ ಅದ್ಭುತವಾದ ಪಾಠವೂ ಆಗಿದೆ.

ನೀವೆಲ್ಲ ಕಥೆ, ಕಾದಂಬರಿಗಳಲ್ಲಿ ಓದಿರಬಹುದು, ಕಥಾ ನಾಯಕ/ಕಿ ಇನ್ನೇನು ಕೆಲವು ದಿನಗಳು ಅಥವಾ ಕೆಲವು ಗಂಟೆಗಳಷ್ಟೇ ಬದುಕಿರುತ್ತೇವೆಂಬ ಸತ್ಯ ಗೊತ್ತಾಗುತ್ತದೆ. ಆ ಕೊನೆಯ ದಿನಗಳಲ್ಲಿ ಅವರು ಏನೆಲ್ಲವನ್ನು ಮಾಡುತ್ತಾರೆ, ತಮ್ಮ ಸುತ್ತಲಿನವರೊಂದಿಗೆ ಹೇಗೆಲ್ಲ ನಡೆದುಕೊಳ್ಳುತ್ತಾರೆ ಎಂಬುದು ಆ ಕಥೆ ಅಥವಾ ಕಾದಂಬರಿಯ ಅತ್ಯಂತ ಆಸಕ್ತಿದಾಯಕವಾದ ಭಾಗವಾಗಿರುತ್ತದೆ. ಇನ್ನು ಕೆಲವೊಮ್ಮೆ ವ್ಯಕ್ತಿಗಳು ತಮ್ಮ ಮರಣವನ್ನು ಪವಾಡಸದೃಶವಾಗಿ ಗೆದ್ದು ಬರುತ್ತಾರೆ. ಅವರಿಗೆ ತಮ್ಮ ಮುಂದಿನ ಬದುಕು ಅಚಾನಕ್ಕಾಗಿ ಒಲಿದು ಬಂದ ಕೊಡುಗೆಯಂತೆ ಭಾಸವಾಗುತ್ತದೆ. ಆ ಘಟನೆ ಖಂಡಿತವಾಗಿಯೂ ಇದುವರೆಗೆ ಬದುಕಿನ ಬಗೆಗಿದ್ದ ಅವರ ದೃಷ್ಟಿಕೋನವನ್ನು ಬದಲಾಯಿಸುತ್ತದೆ. ನಾವು ಇನ್ನೂ ಅದೆಷ್ಟೋ ಕಾಲ ಬದುಕುತ್ತೇವೆ ಎಂಬ